

ಓ.ಎಲ್. ನಾಗಭೂಷಣ ಸ್ವಾಮಿ

# ನೂತ್ನ ನಾಗರಿಕತೆ

ಕುವೆಂಪು ಅವರ 'ರೈಲ್ ರಸ್ತೆ' ಪದ್ಯವು 1944ರಲ್ಲಿ ಪ್ರಕಟವಾದ 'ಕೋಗಿಲೆ ಮತ್ತು ಸೋವಿಯಟ್ ರಷ್ಯಾ' ಸಂಕಲನದಲ್ಲಿದೆ. ತಿಳಿಸಬೇಕಾದ ವಿಚಾರಕ್ಕೆ ತಕ್ಕ ಭಾವಗಳು ಮೂಡಲು ಅಗತ್ಯವಾದ ಪದಗಳ ಆಯ್ಕೆ ಮತ್ತು ಜೋಡಣೆ ಇರುವ ಪದ್ಯ ಇದು. ಸಲೀಸಾಗಿ ಅರ್ಥವಾಗಿ, ನಿಧಾನವಾಗಿ ವ್ಯಂಗ್ಯ ಮತ್ತು ವಿಷಾದಗಳನ್ನು ಹುಟ್ಟಿಸಿ ಆಮೇಲೆ ಪ್ರಶ್ನೆಗಳೂ ಮೂಡುವ ಹಾಗೆ ಮಾಡುತ್ತದೆ; 1933ರಲ್ಲಿ ಪ್ರಕಟವಾದ ಅವರ 'ಪಾಂಚಜನ್ಯ' ಸಂಕಲನದ 'ಕಲ್ಕಿ' ಪದ್ಯದ ಇನ್ನೊಂದು ಮಗ್ಗುಲಾಗಿ ಕಾಣುತ್ತದೆ. ಆ ಸಂಕಲನದ ಮುಖ್ಯಭಾವವಾಗಿದ್ದ ರೌದ್ರಕ್ಕೆ ಸಾಮಾಜಿಕ ಕಾರಣವನ್ನು ಕಂಡುಕೊಂಡ ಸಾಕ್ಷಿಯಾಗಿಯೂ ಇದೆ.

* * *

ಬಿರು ಬಿಸಿಲು, ಸುಡುವ ಭೂಮಿ, ಎಚ್ಚರ ತಪ್ಪಿದ ನಿಸರ್ಗ... ಈ ಮೂಲೆಯಲ್ಲಿ ಶುರುವಾಗಿ ಆ ಮೂಲೆಯತ್ತ ಸಾಗುವ ಕಡು ಕಪ್ಪು ಬಣ್ಣವನ್ನು ಕಣ್ಣಿಗೆ 'ಕಾರುವ' ರೈಲು ಕಂಬಿ 'ಕಾಲಸರ್ಪ'ದ ಹಾಗಿವೆ, 'ನೂತ್ನ' ನಾಗರಿಕತೆಯ 'ಯಂತ್ರ ಹೃದಯ'ಕ್ಕೆ ರಕ್ತವನ್ನು ಪೂರೈಸುವ 'ಲೋಹದ ರಕ್ತನಾಳ'ದಂತಿವೆ.

ಮೇಯುತಿರುವ ಬಡಕಲು ಹಸುಗಳಿಗೆ ತಮ್ಮ ನೆರಳೇ ಕಾವು ಅನಿಸುತಿದೆ. ಎಲೆ ಇಲ್ಲದ ಮರ ಮಳೆಯ ಹಾರೈಸಿದೆ. ಮರದ 'ನೆರಳಿನ ಎಲುಬು ಗೂಡ'ನ್ನೂ ಬಿಸಿಲು ಸುಡುತಿದೆ. ಅದು ವೈಶಾಖ ರುದ್ರನ ಸಮಾಧಿ. ಎಲ್ಲೆಡೆಯಲ್ಲೂ ಹೆಣದ ಹಾಗಿರುವ ನಿಶ್ಶಬ್ದ. ಇದೇನನ್ನೂ ಲೆಕ್ಕಿಸದೆ, ಬಿಸಿಲ ಝಳಕ್ಕೆ 'ಕಂಪಿಸಿದ' ಹಾಗೆ ಕಾಣುತ್ತ ರೈಲುಹಾದಿ 'ಹರಿಯುತಿದೆ'.

'ವಿಕರಾಳ ಎಂಜಿಣ್ಣು' ಎಳೆಯುತಿರುವ, ರೈಲು ದೊಡ್ಡದೊಂದು 'ಒನಕೆಹುಳು': ಸದ್ದು, ಹೊಗೆ; ಜನರಿದ್ದಾರೋ, ಸಾಮಾನು ತುಂಬಿದ್ದಾರೋ 'ಗೊಡವೆ' ಇಲ್ಲದೆ, 'ಚಿಂತೆ' ಇಲ್ಲದೆ ಓಡುತಿದೆ.

ರೈಲು 'ಮಿಂಚಿ ಮರೆಯಾದ' ತಕ್ಷಣ ಆ ಬಯಲು ಬಿಸಿಲಲ್ಲಿ ಮತ್ತೆ ಎಚ್ಚರ ತಪ್ಪಿತು. ರೈಲು ಅನ್ನುವುದು 'ಬಯಲಿನ ನಿದ್ರೆ ಕಂಡ ಕೆಟ್ಟ ಕನಸು'. ಜೀವಿಗಳ ಮೈಯ ನೆತ್ತರನ್ನೆಲ್ಲ ಹೀರಿ ಒಣಗಿಸಲು ಕತ್ತರಿಸಿದ ನರ–ರೈಲು ದಾರಿ. ಮೇಯುವ ದನದ ರಕ್ತವನ್ನು ದಿನ ದಿನವು ಹೀರಿ ಕೊಂಡಯ್ಯುವ 'ನಾಗರಿಕತೆಯ ನಾಡಿ' ರೈಲು ದಾರಿ. ಹೀಗೆಂದರೆ ನಂಬುವುದಿಲ್ಲ ಯಾರೂ, ನಂಬದೆ ಇರಬಾರದು ಯಾರೂ.

ಜೀವ ಇರುವುದೆಲ್ಲವೂ, ನಿಸರ್ಗವೂ ನಿಶ್ಶಕ್ತ, ಅಸಹಾಯಕ, ಮರಣ ಪ್ರಾಯ. ಮೌನವೂ ಹೆಣವಾಗಿದೆ. ಹರಿಯುತಿರುವ ಕಂಬಿ ದಾರಿ, ಕರ್ಕಶ ಸಿಳ್ಳು ಹಾಕುವ ಎಂಜಿಣ್ಣು ಇವು ಮಾತ್ರ ಜೀವಂತವಾಗಿ ಮಿಡಿಯುತಿವೆ, ಚಲಿಸುತಿವೆ.

